ಅಸಲು ದಾವಾ ಸಂಖ್ಯೆ - 129/2024
ಪಿಡಬ್ಲ್ಯೂ - 01
ದಿನಾಂಕಃ 02-08-2025
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಪಿ ಆರ್ ಕೆ  ವಕೀಲರಿಂದಃ</u>**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಶಿರಬಡಗಿ ಗ್ರಾಮ ಪಂಚಾಯತಿಯ ಆಸ್ತಿ ಸಂಖ್ಯೆ 426 ರ ಉತಾರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 1 ಎಂದು ಗುರುತಿಸಲಾಯಿತು.

ದಿಃ 06-12-2017 ರಂದು ಶಿರಬಡಗಿ ಗ್ರಾಮಪಂಚಾಯತಿ ರವರು ಹೊರಡಿಸಿದ 3 ಪೂಟಗಳ ಠರಾವಿನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 2 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ  ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರನ್ನು ಗೈರು ಹಾಜರಿದ್ದು ಮತ್ತು ಅವರು ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ  ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆಃ ಇಲ್ಲ.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು